ಶ್ರೀ ಎಸ್. ಎಂ. ಕೃಷ್ಣ (ಮಾನ್ಯ ಮಂತ್ರಿಯವರು) :

ಅ) ಹಾವೇರಿ ಜಿಲ್ಲೆಗೆ ಒಳಪಡುವ ಕೆಳಕಂಡ ನಗರ ಪ್ರದೇಶಗಳಲ್ಲಿ ನೀರು ಸರಬರಾಜು ಯೋಜನೆಗಳನ್ನು ಸರ್ಕಾರವು ಕೈಗೊಂಡಿದೆ.

1. ಹಾವೇರಿ

2. ರಾಣಿಬೆನ್ನೂರು- ಬ್ಯಾಡಗಿ

3. ಶಿಗ್ಗಾಂವ್-ಸವಣೂರು.

ಆ) ಮೇಲ್ಕಂಡ ನೀರು ಸರಬರಾಜು ಯೋಜನೆಗಳಿಗೆ ತಗಲುವ ವೆಚ್ಚ ಈ ಕೆಳಕಂಡಂತೆ ಇರುತ್ತದೆ.

ನಗರ	ಅನುಮೋದನೆಯ ಮೊತ್ತ	ಪರಿಷ್ಕೃತ ಮೊತ್ತ ತಗಲುವ ವೆಚ್ಚ
1. ಹಾವೇರಿ	ರೂ. 1522.78	1522.78
2. ರಾಣಿಬೆನ್ನೂರು - ಬ್ಯಾಡಗಿ	ರೂ. 450.00	2200.00
3. ಶಿಗ್ಗಾವಂ-ಸವಣೂರು	ರೂ. 745.00	1491.50

ಇ) ಈ ಯೋಜನೆಗಳ ಕಾಮಗಾರಿಗಳು ಪ್ರಗತಿಯಲ್ಲಿವೆ.

ಈ) ಮೊತ್ತ ರೂ. 450.00 ಲಕ್ಷಗಳು

ಉ) ರಾಣಿಬೆನ್ನೂರು-ಬ್ಯಾಡಗಿ ಯೋಜನೆಯನ್ನು ಮೇ 2001ರಲ್ಲಿ ಪೂರ್ಣಗೊಳಿಸಲು ಉದ್ದೇಶಿಸಲಾಗಿದೆ.

ಊ) ಸುಮಾರು ರೂ. 22.00 ಕೋಟಿ ವೆಚ್ಚವಾಗಬಹುದು.

ಸಮಾಜ ಕಲ್ಯಾಣ ಇಲಾಖೆಯಲ್ಲಿನ ವಿದ್ಯಾರ್ಥಿ ನಿಲಯದ ಮೇಲ್ವಿಚಾರಕ ಹುದ್ದೆಗಳು

285 (556) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :- ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವವರೆ?

ಅ) ಸಮಾಜ ಕಲ್ಯಾಣ ಇಲಾಖೆಯು ನಡೆಸುತ್ತಿರುವ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು?

ಆ) ಈ ವಿದ್ಯಾರ್ಥಿನಿಲಯಗಳಲ್ಲಿ ಖಾಲಿ ಇರತಕ್ಕ ಮೇಲ್ವಿಚಾರಕರ ಹುದ್ದೆಗಳ ಸಂಖ್ಯೆ ಎಷ್ಟು?

ಇ) ಈ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು)

ಅ) 1353

ಆ) 569

ಇ) ನೇರ ನೇಮಕಾತಿ ನಿರ್ಬಂಧವನ್ನು ಸರ್ಕಾರಿ ಆದೇಶ ಸಂಖ್ಯೆ: ಡಿ.ಪಿ.ಎ.ಆರ್. 103 ಸೇವನಿ 2000, ದಿನಾಂಕ: 17-02-2001 ರಲ್ಲಿ ಸಡಿಲಗೊಳಿಸಿದೆ. ತೆರವಿರುವ ಹುದ್ದೆಗಳನ್ನು ನಿಯಮಗಳನ್ವಯ ತುಂಬಲು ಕ್ರಮ ಜರುಗಿಸಲಾಗುತ್ತಿದೆ.

ಬೆಂಗಳೂರು ನಗರದಲ್ಲಿರುವ ಸಣ್ಣ ಕೈಗಾರಿಕೆಗಳು

286(557) ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ):- ಮಾನ್ಯ ಸಣ್ಣ ಕೈಗಾರಿಕಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಬೆಂಗಳೂರು ನಗರದಲ್ಲಿರುವ ಸಣ್ಣ ಕೈಗಾರಿಗಳೆಷ್ಟು?

ಆ)ಇವುಗಳ ಪೈಕಿ ಎಷ್ಟು ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗಿವೆ.

ಇ) ಸಣ್ಣ ಕೈಗಾರಿಕೆಗಳನ್ನು ಪುನಶ್ಚೇತನ ಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು?

ಈ) ಸಣ್ಣ ಕೈಗಾರಿಕೆಗಳು ರೋಗಗ್ರಸ್ತವಾಗುವುದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಎಸ್.ಆರ್.ಕಾಶಪ್ಪನವರು (ಸಣ್ಣ ಕೈಗಾರಿಕಾ ಸಚಿವರು) :

ಅ) 42966

ಆ) 161. (ಆರ್.ಬಿ.ಐ. ನಾರ್ಮ್ಸ್ ಪ್ರಕಾರ)

ಇ) ಸರ್ಕಾರದ ನಿಯಮಾವಳಿ ಪ್ರಕಾರ ಒಟ್ಟು 29 ಸಣ್ಣ ಪ್ರಮಾಣದ ರೋಗಗ್ರಸ್ಥ ಕೈಗಾರಿಕೆಗಳಿಗೆ ಈ ಕೆಳಕಂಡ ಸಹಾಯ ಸೌಲಭ್ಯ ಕಲ್ಪಿಸಲಾಗುತ್ತಿದೆ.

1) ಅರ್ಹವಿರುವ ರೋಗಗ್ರಸ್ಥ ಕೈಗಾರಿಕಾ ಘಟಕಗಳಿಗೆ ಸರ್ಕಾರದ ವತಿಯಿಂದ ರೂ. 2.50 ಲಕ್ಷಗಳವರೆಗೆ ಬೀಜಧನ ಸಾಲ ಮಂಜೂರಾತಿ ಮಾಡಲು ಅವಕಾಶವಿದೆ.

2) 16 ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪುನಃಶ್ಚೇತನ ಯೋಜನೆಯಡಿಯಲ್ಲಿ ಈಗಾಗಲೇ ರೂ. 21.43 ಲಕ್ಷಗಳ ಬೀಜಧನ ಸಾಲ ಸೌಲಭ್ಯವನ್ನು ಒದಗಿಸಲಾಗಿದೆ.

3) 9 ರೋಗಗ್ರಸ್ಥ ಸಣ್ಣ ಪ್ರಮಾಣದ ಕೈಗಾರಿಕೆಗಳಿಗೆ ಪುನಃಶ್ಚೇತನ ಯೋಜನೆಯಡಿಯಲ್ಲಿ ಸುಲಭ ಕಂತುಗಳಲ್ಲಿ ಮಾರಾಟಕರ ತೆರಿಗೆ ಬಾಕಿ ಹಾಗೂ ವಿದ್ಯುಚ್ಛಕ್ತಿಯ ಬಿಲ್ ಬಾಕಿ ಪಾವತಿಸಲು ಅನುಕೂಲ ಮಾಡಿಕೊಡಲಾಗಿದೆ.

ಈ) ರೋಗಗ್ರಸ್ತ ಸಣ್ಣ ಕೈಗಾರಿಕೆಗಳ ಸಮಸ್ಯೆಗಳನ್ನು ಬಗ್ಗೆ ಹರಿಸಲು ಜಿಲ್ಲಾ ಕೈಗಾರಿಕಾ ಕೇಂದ್ರಗಳ ಜಂಟಿ ನಿರ್ದೇಶಕರುಗಳ ಅಧ್ಯಕ್ಷತೆಯಲ್ಲಿ ಜಿಲ್ಲಾ ಮಟ್ಟದ ಟಾಸ್ಕ್‌ಫೋರ್ಸ್ ಸಮಿತಿಗಳನ್ನು ರಚಿಸಲಾಗಿದೆ. ಈ ಸಮಿತಿಗೆ ರೋಗಗ್ರಸ್ತ ಕೈಗಾರಿಕೆಗಳನ್ನು ಅವುಗಳ ಪ್ರಾರಂಭಿಕ ಹಂತದಲ್ಲಿಯೇ ಗುರುತಿಸಿ ಅವುಗಳು ರೋಗಗ್ರಸ್ತವಾಗುವುದನ್ನು ತಪ್ಪಿಸಲು ಕ್ರಮ ಕೈಗೊಳ್ಳಲು ಸೂಚನೆ ನೀಡಲಾಗಿದೆ.